# ಮಹಾವಲಸೆ: ಮರಳಿ ಊರಿಗೆ



ಕೊರೊನಾ ಸೋಂಕು ನಿಯಂತ್ರಣದ ಉದ್ದೇಶದಿಂದ ಮಾರ್ಚ್ 24ರಂದು ಒಮ್ಮೆಲೇ ಜಾರಿಗೊಂಡ ಲಾಕ್‌ಡೌನ್‌ನಿಂದಾಗಿ ನಗರ ಪ್ರದೇಶಗಳಲ್ಲಿನ ಲಕ್ಷಾಂತರ ಕಾರ್ಮಿಕರು ಕಂಗಾಲಾದರು. ಊಟ ದೊರೆಯದ, ಬಾಡಿಗೆಗೆ ಹಣವಿಲ್ಲದ ಸ್ಥಿತಿಯಲ್ಲಿ, ದುಡಿಮೆಯ ಅವಕಾಶಗಳು ಮುಚ್ಚಿದ್ದರಿಂದಾಗಿ, ನಗರಗಳಲ್ಲಿ ಉಳಿಯುವುದು ದುಸ್ಸಾಧ್ಯವೆನ್ನಿಸಿ ಅವರು ತಂತಮ್ಮ ಊರುಗಳತ್ತ ಮುಖಮಾಡಿದರು. ಆದರೆ, ಊರಿಗೆ ಹೋಗಲು ವಾಹನಗಳೆಲ್ಲಿ?

ಪ್ರತಿ ದಿನ ದೇಶದಾದ್ಯಂತ ಓಡಾಡುವ ಸಾವಿರಾರು ರೈಲುಗಳು ಮತ್ತು ಬಸ್ಸುಗಳು ಸ್ತಬ್ಧವಾದವು. ರೈಲುಗಳು ಸಂಚಾರವನ್ನು ಸ್ಥಗಿತಗೊಳಿಸಿದಾಗ, ಇಡೀ ದೇಶದ ನಾಡಿಮಿಡಿತವೇ ನಿಂತಂತೆ ಭಾಸವಾಯಿತು. ಆ ಕಾಲಘಟ್ಟವು ಅಸಹನೀಯ ಸಾಮಾಜಿಕ ಮೌನವನ್ನು ನಮ್ಮ ಮುಂದೆ ತೆರೆದಿರಿಸಿತು. ದುಡ್ಡಿದ್ದವರು ಸಾವಿರಾರು ರೂಪಾಯಿ ತೆತ್ತು ಟ್ಯಾಕ್ಸಿಯಲ್ಲಿ ಊರು ಸೇರಿದರು. ಉಳಿದ ಲಕ್ಷಾಂತರ ವಲಸಿಗರು ಹಸಿವು ಮತ್ತು ನೀರಡಿಕೆಯಿಂದ ಉರಿಬಿಸಿಲಿನಲ್ಲೇ ಸದ್ದಿಲ್ಲದೆ ಮೈಲಿಗಟ್ಟಲೆ ನಡೆದುಕೊಂಡು ಹೋದ ಚಿತ್ರಣಗಳು ಮಾನವ ಚರಿತ್ರೆಯ ಕರಾಳ ದಿನಗಳ ಬಿಂಬಗಳಾಗಿ ಉಳಿಯುವಂಥವು. ಸೈಕಲ್‌ನಲ್ಲಿ ತಂದೆಯನ್ನು ಕೂರಿಸಿಕೊಂಡು ನೂರಾರು ಮೈಲಿಗಳ ಗಮ್ಯದತ್ತ ಹೊರಟ ಮಗಳು, ಕಂದಮ್ಮಗಳನ್ನು ಎದೆಗವುಚಿಕೊಂಡು ನಡೆದ ತಾಯಂದಿರು, ಕಣ್ಣುಗಳ ತುಂಬ ಹತಾಶೆಯನ್ನು ತುಂಬಿಕೊಂಡ ದಣಿದ ಕಾಲುಗಳ ಅಸಂಖ್ಯ ಮಂದಿ... ಸಾವುನೋವಿಗೆ ಲೆಕ್ಕವಾದರೂ ಎಲ್ಲಿ?



ವಲಸೆ ಕಾರ್ಮಿಕರು ತಮ್ಮ ಊರುಗಳಿಗೆ ಸೋಂಕನ್ನು ಕೊಂಡೊಯ್ಯಬಹುದೆನ್ನುವ ಭೀತಿಯಿಂದ ಅವರನ್ನು ಕಡ್ಡಾಯವಾಗಿ ಕ್ವಾರಂಟೈನ್‌ನಲ್ಲಿ ಇರಿಸಲಾಯಿತು. ಅನಿರೀಕ್ಷಿತ ಬಿಕ್ಕಟ್ಟಿನಿಂದಾಗಿ ಕೆಲಸ ಕಳೆದುಕೊಂಡವರು ನಗರಗಳನ್ನು ಹೇಗೋ ತೊರೆದು ಊರಿಗೆ ಬಂದು ನೆಲೆಸಿದರು. ಇದರಿಂದಾಗಿ ಕೃಷಿ ಚಟುವಟಿಕೆಗಳು ಚುರುಕಾದವು. ಬೀಳುಬಿದ್ದ ನೆಲಗಳೆಲ್ಲ ಹಸಿರಾದವು. ಮತ್ತೆ ಕೆಲವರು ಈ ನಗರದ ಸಹವಾಸವೇ ಬೇಡವೆಂದು ಹಳ್ಳಿಗಳಿಗೆ ತಮ್ಮ ನೆಲೆ ಬದಲಿಸಿಕೊಂಡರು.

ನಗರದ ಜನ ಹಳ್ಳಿಗಳತ್ತ ಮುಖ ಮಾಡಿದಾಗ, ಅಲ್ಲಿಯೂ ಪರಿಸ್ಥಿತಿ ಆಶಾದಾಯಕವಾಗಿರಲಿಲ್ಲ. ಊರುಗಳಿಗೆ ಬೇಲಿ ಹಾಕಿಸಿ, ಹೊರಗಿನವರಿಗೆ ಪ್ರವೇಶ ನಿರಾಕರಿಸಿದ ಹಳ್ಳಿಗಳಿದ್ದವು. ಅಕ್ಕ–ತಂಗಿ, ಅಣ್ಣ–ತಮ್ಮಂದಿರನ್ನು ಮನೆಗೆ ಸೇರಿಸಲು ಹಿಂಜರಿದರು. ಅಡ್ಡದಾರಿಯಲ್ಲಿ ಊರು ಸೇರಿದವರಿಗೆ ದಂಡ ಹಾಕಿದರು. ■

ಹದಿನೈದು ವರ್ಷದ ಬಾಲಕಿಯೊಬ್ಬಳು ಸೈಕಲ್ ಮೇಲೆ ತನ್ ಅನಾರೋಗ್ಯಪೀಡಿತ ತಂದೆಯನ್ನು ಕೂರಿಸಿಕೊಂಡು ಹರಿಯಾಣದ ಗುರುಗ್ರಾಮದಿಂದ ಬಿಹಾರದ ದರ್ಬಂಗಾಗೆ 1,200 ಕಿ.ಮೀ. ಪ್ರಯಾಣಿಸಿದ್ದು ಲಾಕ್‌ಡೌನ್ ಸಮಯದಲ್ಲಿ ದೇಶದ ಗಮನಸೆಳೆದಿತ್ತು.

# ಮರಳಿ ಮಡಿಲಿಗೆ



ಬದುಕಿನ ಭರವಸೆಯ ನಿರೀಕ್ಷೆಯಲ್ಲಿ ದೀಪ ಬೆಳಗುತ್ತಿರುವುದು

‘ಮಕ್ಕಳಿಸ್ಕೂಲು ಮನೇಲಲ್ವೇ’ ಎನ್ನುವ ಮಾತಿಗೆ ತದ್ವಿರುದ್ಧವಾಗಿ ಮಕ್ಕಳ ಕಲಿಕೆಯನ್ನೆಲ್ಲ ಶಾಲೆ–ಟ್ಯೂಷನ್‌ಗಳಿಗೆ ಒಪ್ಪಿಸಿ ನಿಸೂರಾಗಿದ್ದ ಪಾಲಕರ ಪಾಲಿಗೆ 2020 ದುಸ್ವಪ್ನದ ವರ್ಷ. ಶಾಲೆಗಳ ಬಾಗಿಲು ಮುಚ್ಚಿ, ಮಕ್ಕಳು ಮನೆಯಲ್ಲಿಯೇ ಇರಬೇಕಾದ ಸಂದರ್ಭವನ್ನು ಅರಗಿಸಿಕೊಳ್ಳುವುದೇ ಅನೇಕ ಪೋಷಕರಿಗೆ ಕಷ್ಟವೆನ್ನುವಂತಾಯಿತು. ದಿನದ ಇಪ್ಪತ್ತನಾಲ್ಕು ತಾಸೂ ಮನೆಯಲ್ಲಿಯೇ ಇರಬೇಕಾದ ಮಕ್ಕಳನ್ನು ಸಂಭಾಳಿಸುವುದು ದೊಡ್ಡ ಸಮಸ್ಯೆಯಾಗಿ ಪರಿಣಮಿಸಿತು.

ಕರುಳಕುಡಿಗಳ ಕಲಿಕೆಗಾಗಿ ತಮ್ಮ ವೈಯಕ್ತಿಕ ಸಂತೋಷಗಳನ್ನು ಅದುಮಿಟ್ಟುಕೊಂಡ ಪೋಷಕರು, ಮಕ್ಕಳನ್ನು ಶಾಲೆಗಳಿಗೆ, ಡೇ ಕೇರ್ ಸೆಂಟರ್‌ಗಳಿಗೆ, ಟ್ಯೂಷನ್‌ಗಳಿಗೆ ಒಪ್ಪಿಸಿ, ತಾವು ದುಡಿಮೆಯಲ್ಲಿ ಮುಳುಗಿಹೋಗುವ ಕಾಲಘಟ್ಟವಿದು. ಇಂಥ ಅಪ್ಪ–ಅಮ್ಮಂದಿರ ಲೆಕ್ಕಾಚಾರಗಳನ್ನು ಕೊರೊನಾ ಬುಡಮೇಲು ಮಾಡಿತು. ಮಕ್ಕಳೇನೊ ಪೋಷಕರ ಮಡಿಲಿಗೆ ಸಲೀಸಾಗಿ ಮರಳಿದರೂ, ಎಳೆಯರ ಸಂತಸದಿಂದ ಬರಮಾಡಿಕೊಳ್ಳಬೇಕಾದ ಮಡಿಲುಗಳಿಗೆ ಬಿಡುವೇ ಇರಲಿಲ್ಲ. ಬದುಕಿನ ಯಾವಯಾವುದೋ ತುರ್ತುಗಳಿಗೆ ತಮ್ಮನ್ನು ಒಪ್ಪಿಸಿಕೊಂಡ ಪಾಲಕರು ಮಕ್ಕಳಿಗೆ ಸಮಯ ಕೊಡಲಾಗದೆ ಅಸಹನೆಯಿಂದ ತತ್ತರಿಸಿದ್ದು ಲಾಕ್‌ಡೌನ್ ಕಾಲದ ಸಂದಿಗ್ಧಗಳಲ್ಲೊಂದು. ಮಕ್ಕಳನ್ನು ಸಂಭಾಳಿಸಲಿಕ್ಕೆ ಬೇಕಾದ ಸಮಯ, ಸಹನೆ ಹಾಗೂ ಧಾರಣಾಶಕ್ತಿಯನ್ನು ಕಳೆದುಕೊಂಡಂತೆ ಹಲವು ಪೋಷಕರು ವರ್ತಿಸಿದ್ದು ಬದಲಾದ ಸಾಮಾಜಿಕ ಸಂದರ್ಭಕ್ಕೆ ಕನ್ನಡಿ ಹಿಡಿಯುವಂತಿದೆ. ■